ಮಗ್ನಳಾಗಿರಲಿ ಎಂದದ್ದು ನೆನಪಾಯಿತು. ಚಿಕ್ಕಿಯ ಎಳೆಯ ದೇಹದ ಕಾಮನೆಗಳಿಗೆ ಉತ್ತರವಿಲ್ಲದ ಪರಿಸ್ಥಿತಿ ಅವಳದ್ದು. ತಾಯಿ, ಅಣ್ಣಂದಿರ ನೆರಳಿನ ಸುರಕ್ಷಿತ ಜೀವನ ದೇಹ, ಮನಸ್ಸುಗಳಿಗೆ ಬೇಕಾದ ಎಲ್ಲವನ್ನೂ ಒದಗಿಸಲಾರದು. ತಾಯಿ ಹೇಳುತ್ತಿದ್ದುದು ಈಗ ಕಲ್ಯಾಣಿಗೆ ಅರ್ಥವಾಗತೊಡಗಿತು. ಆದರೆ ದೇಹವನ್ನು ದಂಡಿಸಿದರೆ ಆಸೆಗಳು ನುಚ್ಚುನೂರಾಗುತ್ತವೆಯೇ? ಮರುಗಿದಳು ಕಲ್ಯಾಣಿ.

ಪ್ರತಿವರ್ಷ ಗಂಡನ ಮನೆಯಿಂದ ಕೊಡಲ್ಪಟ್ಟ ಫಲವತ್ತಾದ ಗದ್ದೆಯಿಂದ ಚಿಕ್ಕಿಗೆ ಆದಾಯ ಬರಲಾರಂಭಿಸಿ ದಿನ ಕಳೆದಂತೆ ದೊಡ್ಡ ಮೊತ್ತವಾಗಲಾರಂಭಿಸಿತು. ಅದರಲ್ಲಿ ನಿಯಮಿತವಾಗಿ ಮಗಳ ಭವಿಷ್ಯಕ್ಕಾಗಿ ತೆಗೆದಿಟ್ಟ ಹಣ ಬೇಕಾದಷ್ಟಾಯಿತು. ಊರೊಟ್ಟಿನ ಕೆಲಸಗಳಿಗೆ ಚಿಕ್ಕಿಯ ಸಹಾಯ ಹಸ್ತ ಇದ್ದೇ ಇರುತ್ತಿತ್ತು. ಒಮ್ಮೆ ಊರಿನ ವಿದ್ಯಾವಂತ ಹಿರಿಯರು ನಮ್ಮೆಳ್ಳಿ ಐಕ್ಳಿಗೆ ನಮ್ಮೂರಲ್ಲೇ ಐಸ್ಕೂಲು ಆಗಬೇಕು. ನಮ್ಮ ಮಕ್ಕಳು ಮೈಲಿಗಟ್ಟಲೆ ವಿದ್ಯಾಭ್ಯಾಸಕ್ಕಾಗಿ ದಣಿಯುವುದು ಬೇಡ ಎಂದು ಹೈಸ್ಕೂಲ್ ತರಲು ಶ್ರಮಿಸಿ, ಹೈಸ್ಕೂಲ್ ಸರ್ಕಾರದಿಂದ ಸ್ಯಾಂಕ್ಷನ್ ಆಗೇಬಿಟ್ಟಿತು. ಈ ಶಾಲೆಗೆ ಊರಿನ ಜನ ಹಾಕಿದ ಹಣದಲ್ಲಿ ಚಿಕ್ಕಿಯದೇ ದೊಡ್ಡ ಮೊತ್ತ! ಹೀಗೆಯೇ ಊರಿಗೆ ಬಂದ ಪಶುವೈದ್ಯ ಶಾಲೆಗೂ ಚಿಕ್ಕಿಯ ಕಾಣಿಕೆ ಸಂದಿತು. ಪಾಪ ಮೂಕಪ್ರಾಣಿಗಳು ತಮ್ಮ ಕಾಯಿಲೆ ಕಸಾಲೆನ ಯಾರ ಕೈಲಿ ಎಳ್ಕತಾವೇ? ಎನ್ನುವುದೇ ಚಿಕ್ಕಿಯ ಕಾಳಜಿ.



ಮಾವನ ಮಕ್ಕಳು ಮತ್ತು ಚಿಕ್ಕಿಯ ಮಗಳು ಇವರಿಗೆ ಯೋಗ್ಯರನ್ನು ಆರಿಸಿ ಮದುವೆಯೂ ನೆರವೇರಿತು. ಮಾವ ತಂಗಿಯ ಮಗಳು ತನ್ನ ಮಗಳೇ ಎಂಬಂತೆ ಮದ್ವೆ ಮಾಡಿದ. ಎಲ್ಲರೂ ಅವರವರ ಊರು, ಮನೆ ಸೇರಿದ ಮೇಲೆ ಕಾಲಾಂತರದಲ್ಲಿ ಚಿಕ್ಕಿಯ ತಾಯಿ ಮತ್ತು ಅತ್ತಿಗೆ "ಹಳೇ ರಾಗಿ, ಹೂಳಿ ಮಜ್ಜಿಗೆ" ತರಲು ಹೋದರು, ಎಂಬಲ್ಲಿಗೆ ಕಲ್ಯಾಣಿಯ ಮಂಪರು ಕಳೆದು ಯಾರೊ ಹೆಗಲ ಮೇಲೆ ಕೈಯಿಟ್ಟಂತೆ ಆಯಿತು.

ಚಿಕ್ಕಿ ಮೆಲ್ಲಗೆ, ''ಬಾವ್ವ, ಊಟ ಮಾಡ್ವಂತೆ, ನಿಂಗಿಷ್ಟವಾದ ಉಪ್ಸಾರು, ಮುದ್ದೆ ಮಾಡಿದೀನಿ'' ಎಂದರು. ಚಿಕ್ಕಿಯ ಹರೆಯದ ದಿನದಲ್ಲಿ ಅಡುಗೆಮನೆ ಹೇಗಿತ್ತೊ ಈಗಲೂ ಹಾಗೆಯೇ ಇತ್ತು. ಇಲ್ಲಿ ಅಡಿಗೆ ಮಾಡೇ ಇಲ್ಲವೇನೊ ಎಂಬಷ್ಟು ಶುಭ್ರವಾಗಿತ್ತು. ಮನೆ ಮಟ್ಟಿನ ಅಡಿಗೆಯಾಗಲಿ, ನಾಟಿ ಹಾಕುವವರಿಗೆ ಮಾಡುವ ಭಾರೀ ಪ್ರಮಾಣದ ಅಡಿಗೆಯಾಗಲಿ ಚಿಕ್ಕಿಗೆ ಎಲ್ಲವೂ ಸಲೀಸು. ಅಡಿಗೆ ಆದ ಮೇಲೆ ಸಾರು, ಮುದ್ದೆ, ಅನ್ನದ ಪಾತ್ರೆಗಳನ್ನು ಸಿಂಬಿಯ ಮೇಲಿಟ್ಟು, ಪಾತ್ರೆಗಳು ಬಿಸಿಯಿದ್ದರೂ